**ದಿನಾಂಕಃ 17-02-2021 ರಂದು ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ 5ನೇ ಪ್ರತಿವಾದಿ ಪರ ಶ್ರೀ.ಕೆ.ಎಸ್.ಪಿ ವಕೀಲರಿಂದಃ**

ನ್ಯಾಯಾಲಯದ ಮುಂದೆ ಇರುವ ಮಾರೇಗೌಡರು ನನ್ನ ಅಣ್ಣ ಎಂದರೆ ಸರಿ. ಪ್ರತಿವಾದಿ-5 ನನ್ನ ಅಣ್ಣ ಮಾರೇಗೌಡರವರು ಕೆಇಬಿ ಯಲ್ಲಿ ಸರ್ಕಾರಿ ನೌಕರಾಗಿದ್ದರು ಎಂದರೆ ಸರಿ. ಸದರಿಯವರು 1970ರಲ್ಲಿ ಕೆಲಸಕ್ಕೆ ಸೇರಿದ್ದರು ಎಂದರೆ ಸರಿ. ಆಗಿನಿಂದಲೂ ಸದರಿಯವರು ಬೆಂಗಳೂರಿನಲ್ಲಿ ವಾಸಿಸುತ್ತಿದ್ದಾರೆಂದರೆ ಸರಿ. ನಾನು ಮತ್ತು ಅವರು ಒಟ್ಟಾಗಿ ಇರಲಿಲ್ಲ ಎಂದರೆ ಸರಿ. ಸದರಿಯವರು ಕ್ರಯಕ್ಕೆ ಕೊಂಡ ಸ್ವತ್ತನ್ನೂ ಕೂಡ ದಾವೆಯಲ್ಲಿ ಸೇರಿಸಿದ್ದೇನೆಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸದರಿಯವರ ಯಾವುದೇ ಸ್ವತ್ತನ್ನು ದಾವೆಯಲ್ಲಿ ಸೇರಿಸಿಲ್ಲ ಎನ್ನುತ್ತಾರೆ. ನಾನು ಪ್ರತಿವಾದಿ-5ರವರ ಸ್ವತ್ತಿನ ಸಂಬಂಧ ವಕೀಲರಿಗೆ ಯಾವುದೇ ಮಾಹಿತಿ ನೀಡಿಲ್ಲ. ಐಟಂ-5ರ ಸ್ವತ್ತು ನನ್ನ ಅಣ್ಣ ಖರೀದಿಸಿದ ಸ್ವತ್ತಾಗಿದೆ ಎಂದರೆ ಸರಿಯಲ್ಲ, ಅದನ್ನು ಕೂಡ ದಾವೆಯಲ್ಲಿ ಸೇರಿಸಿದ್ದೇನೆಂದರೆ, ಸಾಕ್ಷಿಯು ಸದರಿಯು ನನ್ನ ತಂದೆಯ ಸ್ವತ್ತಾಗಿದೆ ಅದ್ದರಿಂದ ದಾವೆಯಲ್ಲಿ ಸೇರಿಸಿದ್ದೇನೆ ಎನ್ನುತ್ತಾರೆ. ಸದರಿ ಸ್ವತ್ತು ನನ್ನ ತಂದೆ ಸ್ವತ್ತಾಗಿದೆ ಎಂದು ತೋರಿಸಲು ದಾಖಲೆ ಹಾಜರುಪಡಿಸಿದ್ದೇನೆ. ಸಾಕ್ಷಿಯು ಸದರಿಯು ನನ್ನ ತಾತ ನನ್ನ ತಂದೆಗೆ ಬರೆದುಕೊಟ್ಟಿರುವ ಭಾಗದ ಪತ್ರವಾಗಿದೆ. ನಾನು ಯಾವುದೇ ಭಾಗದ ಪತ್ರವನ್ನು ಹಾಜರುಪಡಿಸದೇ ಇದ್ದರೂ ಸುಳ್ಳು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು ಎಲ್ಲಾ ದಾಖಲೆಯನ್ನು ಪಡೆದುಕೊಂಡು ನಂತರ ದಾವೆ ಹೂಡಿರುತ್ತೇನೆ. ಐಟಂ-5ರ ಸ್ವತ್ತನ್ನು ದಿ.18-08-1978ರಲ್ಲಿ ಪ್ರತಿವಾದಿ-5ರವರು ಕ್ರಯಕ್ಕೆ ಪಡೆದಿರುವುದರಿಂದ ನನ್ನ ಬಳಿ ಯಾವುದೇ ದಾಖಲೆ ಇಲ್ಲ ಎಂದರೆ ಸರಿಯಲ್ಲ. ಅದರಂತೆ ಪ್ರತಿವಾದಿ-5ರವರ ಹೆಸರಿನಲ್ಲಿ ಎಲ್ಲಾ ದಾಖಲೆಗಳು ಇದ್ದು, ಸ್ವಾಧೀನಾನುಭವ ಹೊಂದಿದ್ದಾರೆಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಆ ರೀತಿ ದಾಖಲೆಯನ್ನು ಮಾಡಿಸಿಕೊಂಡಿದ್ದಾರೆ ಎನ್ನುತ್ತಾರೆ. ಸದರಿ ದಾಖಲೆಗಳು ಯಾವುದೆಂದು ನನಗೆ ಗೊತ್ತಿಲ್ಲ. ತಾತನ ದಾಖಲೆಗಳು ಮಾತ್ರ ಗೊತ್ತಿದ್ದು ಬೇರೆ ದಾಖಲೆಗಳು ಗೊತ್ತಿರುವುದಿಲ್ಲ. ಐಟಂ-5ರ ಸ್ವತ್ತಿನಲ್ಲಿ ನನಗೆ ಯಾವುದೇ ಭಾಗಾಂಶದ ಹಕ್ಕು ಇಲ್ಲದೇ ಇದ್ದರೂ ಸುಳ್ಳು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಐಟಂ-5ರ ಸ್ವತ್ತನ್ನು ಖರೀದಿಸುವ ವೇಳೆಯಲ್ಲಿ ನಾನು ಅಪ್ರಾಪ್ತಳಾಗಿದ್ದೆ ಎಂದರೆ ಸರಿಯಲ್ಲ. ನಾನು ವಾದಪತ್ರದಲ್ಲಿ ನೀಡಿರುವ ವಯಸ್ಸು ಸುಳ್ಳಾಗಿದೆ ಎಂದರೆ ಸರಿಯಲ್ಲ. ಐಟ-5ರ ಸ್ವತ್ತು ಒಟ್ಟು ಕುಟುಂಬದ ಸ್ವತ್ತು ಅಥವಾ ಪಿತ್ರಾರ್ಜಿತ ಸ್ವತ್ತು ಎಂದು ತೋರಿಸಲು ಯಾವುದೇ ದಾಖಲೆಯನ್ನು ಹಾಜರುಪಡಿಸದೇ ಇದ್ದರೂ ನಾನು ಸುಳ್ಳು

ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಐಟಂ-5 ರ ಸ್ವತ್ತಿನಲ್ಲಿ ನನಗೆ ಯಾವುದೇ ಹಕ್ಕು ಇಲ್ಲ ಎಂದರೆ, ಸಾಕ್ಷಿಯು ಅವರು ಸ್ವಯಾರ್ಜಿತವಾಗಿ ಖರೀದಿಸಿರುವ ಯಾವುದೇ ಸ್ವತ್ತಿನಲ್ಲಿ ನಾನು ಭಾಗಾಂಶ ಕೇಳುತ್ತಿಲ್ಲ, ನಾನು ನಮ್ಮ ತಾತನ ಸ್ವತ್ತಿನಲ್ಲಿ ಭಾಗಾಂಶ ಕೇಳುತ್ತಿದ್ದೇನೆ ಎನ್ನುತ್ತಾರೆ. ನಿಪಿ-1 ರಲ್ಲಿ ಇರುವ ವ್ಯಕ್ತಿಗಳನ್ನು ಪಕ್ಷಗಾರರನ್ನಾಗಿ ಸೇರಿಸಿಲ್ಲ ಎಂದರೆ ಸಾಕ್ಷಿಯು ನಮ್ಮ ಅಪ್ಪನ ಭಾಗದ ಸ್ವತ್ತಿನಲ್ಲಿ ಮಾತ್ರ ಭಾಗ ಕೇಳುತ್ತಿದ್ದೇವೆ ಎನ್ನುತ್ತಾರೆ. ನಿಪಿ-1 ರಲ್ಲಿ ಐಟಂ-1 ರ ಸ್ವತ್ತಿನ ವಿಸ್ತೀರ್ಣ ದಾಖಲಾಗಿಲ್ಲ ಎಂದರೆ ಸರಿಯಲ್ಲ. ನಿಪಿ-2 ರಿಂದ 4 ಮತ್ತು 6 ರ ದಾಖಲೆಗಳಲ್ಲಿ ಇರುವ ವಿಸ್ತೀರ್ಣಕ್ಕೂ ದಾವಾಸ್ವತ್ತಿನ ವಿಸ್ತೀರ್ಣಕ್ಕೂ, ವ್ಯತ್ಯಾಸವಿದ್ದು, ಸದರಿ ದಾಖಲೆಗಳಲ್ಲಿ ಇರುವ ವ್ಯಕ್ತಿಗಳನ್ನು ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ. ಸರಿಯಾಗಿ ಮಾಹಿತಿ ಮತ್ತು ದಾಖಲೆಗಳನ್ನು ಪಡೆದುಕೊಳ್ಳದೇ ತಪ್ಪು ದಾವೆ ಹೂಡಿದ್ದೇನೆಂದರೆ ಸರಿಯಲ್ಲ.

ಐಟಂ-7 ರ ಸ್ವತ್ತಿನ ಸಂಬಂಧ ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನನಗೆ ದಾವೆ ಹೂಡಲು ವ್ಯಾಜ್ಯ ಕಾರಣ ಇಲ್ಲದೇ ಇದ್ದರೂ ನಾನು ಸೃಷ್ಟಿ ಮಾಡಿ ದಾವೆ ಹೂಡಿದ್ದೇನೆಂದರೆ ಸರಿಯಲ್ಲ. ಐಟಂ-5 ರ ಸ್ವತ್ತು ಸುಮಾರು 20 ಲಕ್ಷ ಬೆಲೆ ಬಾಳುತ್ತದೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿ-5 ರವರ ಸ್ವತ್ತಾದ ಐಟಂ-5 ರ ಸ್ವತ್ತನ್ನು ಕಬಳಿಸಬೇಕೆಂಬ ದುರುದ್ದೇಶದಿಂದ ಸದರಿ ಸ್ವತ್ತನ್ನು ಸೇರಿಸಿ ದಾವೆ ಹೂಡಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲಃ**

**(ಉಖ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಒಪ್ಪಿದ್ದಾರೆ,**

2ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಮ್ಹಾಗಡಿ.